ಮೈಸೂರ್ ರೈಲ್ವೆ.

ಇಸ್ತಿಹಾರ್‌ನಾಮಾ.

ತಾರೀಖು 27ನೇ ಆಗಸ್ಟ್ 1896.

ನಂ. 479.—ಬೀರೂರಿಂದ ತವರೊಗ್ಗೆಗೆ ಹಾಗೂರು $38\frac{1}{2}$ ಮೈಲಿಗಳ ಹಾದಲಿ ರೈಲ್ವೇ ಲೈನು ಹಾಕುವ ಬಗ್ಯಾಗಿ ದರಖಾಸ್ತುಗಳು ಇದರಿಂದ ಅಪೇಕ್ಷಿಸಲ್ಪಡುತವೆ.

2. ಮಾಡಬೇಕಾಗಿರುವ ಪ್ರತಿ ತರಹೇದ ಕಾಮುಗಾರಿಗೂ ದರಖಾಸ್ತುಗಳು "ರೇಟುಗಳ ಷೆಡ್ಯೂಲ್" ನಮೂನೆಯಲ್ಲಿ ಇರತಕ್ಕದ್ದು.

3. ಕಾಮುಗಾರಿಯು ಮೂರುಭಾಗಗಳಾಗಿಯೂ ಬೆಂಕೀಪುರದ ಹೊಸಕೇತುವೆ ಮತ್ತು ಅದರ ಕಟ್ಟಿಗಳು ಪ್ರತ್ಯೇಕ ಕಂಟ್ರಾಕ್ಟಾಗಿಯೂ ಕೊಡಲ್ಪಡುವದು. ಸದರೀ ಕಾಮುಗಾರಿಯಲ್ಲಿ ಪರ್ಮನೆಂಟ್ ವೇ ವ ಸ್ಟ್ರೇರ್ಸ್ ಯಂತ್ರಗಳು ಹೊರತಾಗಿ ವಿಸಿಷ್ಟ ಕೆಲಸವೂ ಅಡಗಿರುವದು. ಅಪೇಕ್ಷಿಸುವ ಕಂಟ್ರಾಕ್ಟರುಗಳು ವಂದು ಭಾಗಕ್ಕೆ ಜಾಸ್ತಿಯಾಗಿ ಪ್ರತ್ಯೇಕ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

4. ದರಖಾಸ್ತಿನ ನಮೂನೆಗಳು ಇದರಡಿ ರುಜು ಮಾಡಿರುವವರಿಗೆ ಲಿಖಿತಮೂಲಕವಾಗಿಯಾಗಲಿ ಯಾ ರೂಬರೂ ಆಗಲಿ ಕೇಳಿ ಪಡೆಯಬಹುದು.

5. ದರಖಾಸ್ತುಗಳು 1896ನೇ ಅಕ್ಟೋಬರ್ 1ನೇ ತಾರೀಖಿನ ಮಧ್ಯಾನ್ನದಲ್ಲಾಗಲಿ ಯಾ ತತ್ಪೂರ್ವದಲ್ಲಾಗಲಿ ಈ ಕೆಳಗೆ ರುಜು ಮಾಡಿರುವವರಿಗೆ ತಲ್ಪತಕ್ಕದ್ದು.

6. ಕಂಟ್ರಾಕ್ಟಿನ ವಿಶೇಷ ಸಂಗತಿಗಳು ಮತ್ತು ಷರತ್ತುಗಳು ಮೈಸೂರು ರೈಲ್ವೆಗಳ ಗವರ್ಮೆಂಟ್ ಸೆಕ್ರಟೆರಿಯವರ ಆಫಿಸಿನಲ್ಲಿ, ಆದಿತ್ಯವಾರಗಳು ಮತ್ತು ರಜಾ ದಿನಗಳು ಹೊರತಾಗಿ, 11 ಘಂಟೆಯಿಂದ 4 ಘಂಟೆ ವರಿಗಿನ ಮಧ್ಯೆ ಕಾಲಗಳಲ್ಲಿ ಪ್ರತಿದಿನವೂ ನೋಡಬಹುದು ಮತ್ತು ಸಮಾಚಾರ ಪಡೆಯಬಹುದು.

7. ಕಾಮುಗಾರಿಗಳ ವಿಶೇಷ ಸಂಗತಿಯ ಮತ್ತು ಕಂಟ್ರಾಕ್ಟಿನ ಷರತ್ತುಗಳ ಅಚ್ಚು ಹಾಕಲ್ಪಟ್ಟ ಪ್ರತಿಯು ಮೊದಲು ಹೇಳಿದ್ದಕ್ಕೆ ಹತ್ತು ರೂಪಾಯಿಗಳೂ ಮತ್ತು ತರುವಾಯ ಹೇಳಿದ್ದಕ್ಕೆ ಐದು ರೂಪಾಯಿಗಳೂ ತಲ್ಪಿದ ಮೇಲೆ ಕಳುಹಿಸಲ್ಪಡುವದು.

8. ಈ ಕೆಳಗೆ ರುಜು ಮಾಡಿರುವವರು ಕಮ್ಮಿಯಾದ ಯಾ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹಾಗೆ ಮಾಡುವದಕ್ಕೆ ಕಾರಣಗಳು ತಿಳಿಸದೇನೇ ಉಳಿಸಿಕೊಂಡಿರುತ್ತಾರೆ.

ಹುಕುಂ ಬಮೋಜೇಬ್,
ಸಿ. ಬರ್ವ್, ಕರ್ನಲ್,
ಮೈಸೂರ್ ರೈಲ್ವೆಗಳ ಗವರ್ಮೆಂಟ್ ಸೆಕ್ರಟೆರಿ.